ನಾಟಕ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-583276

| ಕ್ರ.ಸಂ. | ಶೀರ್ಷಿಕೆ | ವಿವರ |
|---|---|---|
| ೦೧. | ಪರಿಚಯ | ಕನ್ನಡ ವಿಶ್ವವಿದ್ಯಾಲಯದಲ್ಲಿ ನಾಟಕ ವಿಭಾಗವನ್ನು ನವೆಂಬರ್ ೨೦೧೬ರಲ್ಲಿ ಸ್ಥಾಪಿಸಲಾಯಿತು. ಕಾರಣವೇನೆಂದರೆ ಬಳ್ಳಾರಿ ಜಿಲ್ಲೆ ದೊಡ್ಡಾಟ, ನಾಟಕ, ಬಯಲಾಟ ಇತ್ಯಾದಿ ಕಲೆಗಳಿಗೆ ಹೆಸರುವಾಸಿಯಾದ ಜಿಲ್ಲೆಯಾಗಿರುವುದರಿಂದ ಈ ಜಿಲ್ಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ಬರುವುದರಿಂದ ಈ ವಿಭಾಗವನ್ನು ಸ್ಥಾಪಿಸಲಾಗಿದೆ. ಈಗ ಬಳ್ಳಾರಿ ಜಿಲ್ಲೆಯಿಂದ ಪ್ರತ್ಯೇಕವಾಗಿ ವಿಜಯನಗರ ಜಿಲ್ಲೆ ಅಸ್ತಿತ್ವಕ್ಕೆ ಬಂದಿದೆ. ಕನ್ನಡ ವಿಶ್ವವಿದ್ಯಾಲಯದ ನಾಟಕ ವಿಭಾಗದಿಂದ ಹಲವಾರು ನಾಟಕಗಳನ್ನು ಪ್ರಯೋಗ ಮಾಡುವುದರ ಮೂಲಕ, ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುವುದರ ಮೂಲಕ, ಯೋಜನೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಈ ವಿಭಾಗವನ್ನು ಕಟ್ಟಲಾಗಿದೆ. |
| ೦೨. | ದೂರದೃಷ್ಟಿ ಮತ್ತು ಧ್ಯೇಯ | ಕನ್ನಡ ವಿಶ್ವವಿದ್ಯಾಲಯದಲ್ಲಿ ನಾಟಕ ವಿಭಾಗ ಇರುವುದರಿಂದ ಹವ್ಯಾಸಿ ಕಲಾವಿದರಿಂದ ಹಲವಾರು ನಾಟಕಗಳನ್ನು ಪ್ರಯೋಗಿಸಲಾಗಿದೆ. ಹಾಗೆಯೇ ಪ್ರತಿ ವರ್ಷ ನಿನಾಸಂ ಅವರ ತಿರುಗಾಟದಿಂದ ಅವರಿಂದಲೂ ಕೂಡ ನಾಟಕಗಳನ್ನು ಪ್ರಯೋಗಿಸಲಾಗಿದೆ. ದೊಡ್ಡಾಟ, ಬಯಲಾಟ ನಾಟಕಕ್ಕೆ ಮಾತ್ರ ಹೆಚ್ಚಿನ ಒತ್ತನ್ನು ನೀಡಲಾಗಿದೆ. |
| ೦೩. | ಅನನ್ಯತೆ | ಕನ್ನಡ ವಿಶ್ವವಿದ್ಯಾಲಯದಲ್ಲಿ ನಾಟಕ ವಿಭಾಗವನ್ನು ಸ್ಥಾಪನೆ ಮಾಡುವುದರ ಮೂಲಕ ಹಲವಾರು ನಾಟಕ ಕಲಾವಿದರು ರಂಗಕಲಾವಿದರು, ಹವ್ಯಾಸಿ ನಾಟಕ ಕಲಾವಿದರು ಬಂದು ಹೋಗುವ ಒಂದು ಸಂಬಂಧ ಈ ನಾಟಕ ವಿಭಾಗದಿಂದ ತನ್ನದೇ ಆದಂತ ಅನನ್ಯತೆಯನ್ನು ಪಡೆದುಕೊಂಡಿದೆ. |
| ೦೪. | ಪ್ರಮುಖ ಕಾರ್ಯಕ್ರಮಗಳು (ಪಿಎಚ್.ಡಿ. ಎಂ.ಎ.ಪಿಎಚ್.ಡಿ, ಡಿಪ್ಲೊಮಾ ಇತ್ಯಾದಿ) | ಮಾನ್ಯ ಕುಲಪತಿಗಳ ಆದೇಶದಂತೆ ನಾಟಕ ಡಿಪ್ಲೊಮಾ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. |
| ೦೫. | ಪ್ರಮುಖ ಕೊಡುಗೆಗಳು | ೧. ನೀನಾಸಂ ಅವರಿಂದ ತಿರುಗಾಟ ನಾಟಕದ ಪ್ರಯುಕ್ತ ಪ್ರತಿವರ್ಷ ಎರಡು ನಾಟಕಗಳು ಕನ್ನಡ ವಿಶ್ವವಿದ್ಯಾಲಯದಲ್ಲಿ ಜರುಗುತ್ತಿವೆ.<br>೨. ಬೀದಿ ನಾಟಕ ಪ್ರದರ್ಶನಗಳು ಕೂಡ ನಡೆಸಲಾಗಿದೆ.<br>೩. ವಿಶ್ವರಂಗ ದಿನಾಚರಣೆಯನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ.<br>೪. ಪ್ರತಿ ಬೆಳದಿಂಗಳ ಹುಣ್ಣಿಮೆಯಲ್ಲಿ ತಿಂಗಳ ಹುಣ್ಣಿಮೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>೫. ಪ್ರಮುಖವಾಗಿ ಗೊಂದಲಿಗರ ತಂಡದಿಂದ ತಿಂಗಳ ಹುಣ್ಣಿಮೆ ಕಾರ್ಯಕ್ರಮವನ್ನು ನಡೆಸಲಾಗಿದೆ.<br>೬. ನಾಟಕ ವಿಭಾಗದಿಂದ ಬಯಲಾಟೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>೭. ನಾಟಕ ವಿಭಾಗದಿಂದ ಹಲವಾರು ನಾಟಕ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗದೆ. |
| ೦೬ | ಅಧ್ಯಾಪಕರ ವಿವರ | ಡಾ.ತಾರಿಹಳ್ಳಿ ಹನುಮಂತಪ್ಪ<br>ಮುಖ್ಯಸ್ಥರು, ನಾಟಕ ವಿಭಾಗ |

| | | |
|---|---|---|
| | | ಕನ್ನಡ ವಿಶ್ವವಿದ್ಯಾಲಯ, ಹಂಪಿ<br>ವಿದ್ಯಾರಣ್ಯ–583276 |
| ೦೭. | ವಿಭಾಗವು ಸಂಯೋಜಿಸಿದ ಕಾರ್ಯಾಗಾರ/ವಿಚಾರ ಸಂಕಿರಣಗಳು/ಕಮ್ಮಟಗಳು/ವಿಶೇಷ ಉಪನ್ಯಾಸಗಳು/ದತ್ತಿ ಉಪನ್ಯಾಸಗಳು | ೧. ಕನ್ನಡ ವಿಶ್ವವಿದ್ಯಾಲಯದ ನಾಟಕ ವಿಭಾಗದಿಂದ ಸೂಫಿ ಪರಂಪರೆ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ೨೪–೩–೨೦೧೭ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಭುವನ ವಿಜಯದಲ್ಲಿ ಹಮ್ಮಿಕೊಳ್ಳಲಾಗಿದೆ.<br>೨. ಬಯಲಾಟೋತ್ಸವ ವಿಚಾರ ಸಂಕಿರಣವನ್ನು ೧೯–೭–೨೦೧೭ರಲ್ಲಿ ಹಮ್ಮಿಕೊಳ್ಳಲಾಗಿದೆ. |
| ೦೮. | ವಿಭಾಗದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ವಿವರಗಳು | –– |
| ೦೯. | ಸಾಂಸ್ಥಿಕ ಯೋಜನೆಗಳು (ಸಾಂಸ್ಥಿಕ, ವೈಯಕ್ತಿಕ) | –– |
| ೧೦. | ವಿಭಾಗವು ಪ್ರಕಟಿಸಿದ ಪುಸ್ತಕ ಹಾಗೂ ಸಂಶೋಧನಾ ಲೇಖನಗಳ ವಿವರ (ಐಎಸ್‌ಬಿಎನ್/ಐಎಸ್‌ಎಸ್‌ಎನ್ ಇತ್ಯಾದಿ) | –– |
| ೧೧. | ಉತ್ತಮ ಚಟುವಟಿಕೆಗಳು | ಪ್ರತಿ ವರ್ಷವೂ ಕರ್ನಾಟಕದ ಬೇರೆ ಬೇರೆ ತಂಡಗಳಿಂದ ನಾಟಕಗಳನ್ನು ಏರ್ಪಡಿಸಲಾಗುವುದು. |
| ೧೨. | ಭವಿಷ್ಯದ ಯೋಜನೆಗಳು | ೧. ಖ್ಯಾತ ರಂಗ ಕಲಾವಿದೆ ಡಾ.ಕೆ.ನಾಗರತ್ನಮ್ಮ ಅವರ ಬದುಕು ಮತ್ತು ಮೆಲುಕು ಎಂಬ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ಕೈಗೊಳ್ಳಲು ಪ್ರಯತ್ನಿಸಲಾಗುವುದು.<br>೨. ಮನ್ಸೂರ್ ಸುಭದ್ರಮ್ಮ ಅವರ ಜೀವನ ಚರಿತ್ರೆ ಕುರಿತು ವಿವಿಧ ವಿದ್ವಾಂಸರಿಂದ ಲೇಖನಗಳನ್ನು ಸಂಗ್ರಹಿಸಿ ಬೃಹತ್ ಗ್ರಂಥವನ್ನು ಹೊರ ತರುವ ಉದ್ದೇಶವನ್ನು ಹೊಂದಲಾಗಿದೆ. |
| ೧೩. | ಮುಖ್ಯಸ್ಥರ ಸಂಪರ್ಕ ವಿಳಾಸ | ಡಾ.ತಾರಿಹಳ್ಳಿ ಹನುಮಂತಪ್ಪ<br>ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು<br>ನಾಟಕ ವಿಭಾಗ<br>ಕನ್ನಡ ವಿಶ್ವವಿದ್ಯಾಲಯ, ಹಂಪಿ<br>ವಿದ್ಯಾರಣ್ಯ–583276, ಮೊ.9448989275 |